ಸಿ.ಸಿ ನಂಃ 157/2024

ಸಿ ಡಬ್ಲುಃ 01

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **10.04.2026..** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್.ಎ.ಎನ್., ಆರೋಪಿತರ ಪರ ವಕೀಲರಿಂದಃ**

ಸದರಿ ದಿನದಂದು ಆರೋಪಿತರು ನಮ್ಮ ಮನೆಗೆ ಅಕ್ರಮವಾಗಿ ಪ್ರವೇಶಿಸಿರುತ್ತಾರೆಂದು ಹೇಳಿದ್ದು, ಅವರಲ್ಲಿ ಮೊದಲು ಯಾರು ಬಂದರು ಎಂದರೆ, ಮೊದಲು ಯಾರು ಬಂದರು ಎಂದು ಗೊತ್ತಾಗಲಿಲ್ಲ, ಸುಮಾರು 50-60 ಜನರು ಇದ್ದರು.ಅವರಲ್ಲಿ ಕೈಯಿಂದ ಯಾರು ಹೊಡೆದರು, ಬಡಿಗೆಯಿಂದ ಯಾರು ಹೊಡೆದರೆಂದು ನನಗೆ ಗೊತ್ತಾಗಲಿಲ್ಲ. ಸದರಿ ದಿನದಂದು ನನ್ನ ಸೀರೆಯ ಸೆರಗನ್ನು ಹಿಡಿದು ಎಳೆದರು ಮತ್ತು ನನಗೆ ಕೈಯಿಂದ ಹೊಡೆದರು ಎಂದು ಹೇಳಿದ್ದು, ಯಾರು ಆ ರೀತಿ ಮಾಡಿರುತ್ತಾರೆ ಎಂದರೆ, ಯಾರೆಂದು ಹೇಳಲು ಆಗುವುದಿಲ್ಲ, ಸುಮಾರು ಜನರು ಇದ್ದರು ಎಂದು ನುಡಿಯುತ್ತಾರೆ. ಅಷ್ಟು ಜನರಲ್ಲಿ ಯಾರು ಅವಾಚ್ಯ ಶಬ್ದಗಳಿಂದ ಬೈದರು ಎಂದು ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಜೀದ ಧಮಕಿ ಯಾರು ಹಾಕಿದರು ಎಂದು ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು 26 ನೇ ತಾರೀಖಿನಂದು ಮಾಡಿರುತ್ತಾರೆ, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಸಹಿ ಮಾಡು ಎಂದು ಹೇಳಿದ್ದು , ನಾನು ಸಹಿ ಮಾಡಿರುತ್ತೇನೆ. ಸದರಿ ದಿನದಂದು 2-3 ಛಾಯಾ ಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ. ನಮ್ಮ ಮತ್ತು ಆರೋಪಿತರ ನಡುವೆ ಶೌಚಾಲಯದ ನೀರಿನ ಸಲುವಾಗಿ ಆಗಾಗ ಜಗಳವಾಗುತ್ತಿರುತ್ತದೆ ಎಂದರೆ ಹೌದು. ಊರ ಹಿರಿಯರು ಒಂದೆರಡು ಬಾರಿ ಪಂಚಾಯತಿಯನ್ನೂ ಸಹ ಮಾಡಿದ್ದರು ಎಂದರೆ ಹೌದು. ಹೀಗಾಗಿ ಅವರ ಮೇಲಿನ ದ್ವೇಷದಿಂದ ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮತ್ತೊಮ್ಮೆ ಕೇಳಲಾಗಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು, ಅವರು ನಮ್ಮ ಮಕ್ಕಳಿಗೆ ಧಮಕಿ ಹಾಕಿದ್ದರಿಂದ, ದೂರನ್ನು ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರಿಗೂ ಮತ್ತು ಮುದ್ದೆ ಮಾಲಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ, ಅದೇನು ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿ ನನ್ನ ಸೀರೆಯನ್ನು ಎಳೆದು, ಮಾನಕ್ಕೆ ಕುಂದುಂಟು ಮಾಡಿರುತ್ತಾನೆ ಎಂದು ಹೇಳಿದ್ದು, ಆದರೆ ಈಗ ಬಹಳ ಜನರಿದ್ದರು, ಯಾರು ಹಾಗೆ ಮಾಡಿದರು ಎಂದು ಗೊತ್ತಿಲ್ಲ ಎಂದು ನುಡಿದಿದ್ದು, ಇವುಗಳಲ್ಲಿ ಯಾವುದು ಸತ್ಯ ಎಂದರೆ, ಈ ದಿನ ಹೇಳಿರುವುದು ನಿಜವೆಂದು ನುಡಿಯುತ್ತಾರೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಕೈಯಿಂದ ಮತ್ತು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು -2 ರಿಂದ ಹಲ್ಲೆ ಮಾಡಿರುತ್ತಾರೆಂದು ಹೇಳಿದ್ದು, ಆದರೆ ಈಗ ಯಾರು ಹಲ್ಲೆ ಮಾಡಿರುತ್ತಾರೆಂದು ನೋಡಿಲ್ಲ ಎಂದು ಹೇಳಿದ್ದು ಇವುಗಳಲ್ಲಿ ಯಾವುದು ಸತ್ಯ ಎಂದರೆ, ಈ ದಿನ ಹೇಳಿರುವುದು ನಿಜವೆಂದು ನುಡಿಯುತ್ತಾರೆ. ಅದೇ ರೀತಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಅಕ್ರಮ ಪ್ರವೇಶ ಮಾಡಿ, ಜೀವದ ಬೆದರಿಕೆ ಹಾಕಿರುತ್ತಾರೆ ಎಂದು ಹೇಳಿದ್ದು, ಈಗ ಯಾರು ಮಾಡಿರುತ್ತಾರೆಂದು ಗೊತ್ತಿಲ್ಲವೆಂದು ಹೇಳಿದ್ದು, ಇವುಗಳಲ್ಲಿ ಯಾವುದು ಸತ್ಯ ಎಂದರೆ, ಈ ದಿನ ಹೇಳಿರುವುದು ನಿಜವೆಂದು ನುಡಿಯುತ್ತಾರೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿ ನನ್ನ ಸೀರೆಯನ್ನು ಎಳೆದು, ಮಾನಕ್ಕೆ ಕುಂದುಂಟು ಮಾಡಿರುತ್ತಾನೆ ಎಂದು ಹೇಳಿದ್ದು ಮತ್ತು ಆರೋಪಿತರು ಮುದ್ದೆ ಮಾಲು 2 ರಿಂದ ಹಲ್ಲೆ ಮಾಡಿರುತ್ತಾರೆಂದು ಹೇಳಿದ್ದು,

ಆದರೆ ಈಗ ನನ್ನ ಪಾಟೀ ಸವಾಲಿನಲ್ಲಿ ಆರೋಪಿತರಿಗೆ ಮತ್ತು ಮುದ್ದೆ ಮಾಲುಗಳಿಗೆ ಯಾವುದೇ ಸಂಬಂಧ ಇಲ್ಲ ಎಂದು ಹೇಳಿದ್ದು, ಇವುಗಳಲ್ಲಿ ಯಾವುದು ಸತ್ಯ ಎಂದರೆ, ಈ ದಿನ ಹೇಳಿರುವುದು ನಿಜವೆಂದು ನುಡಿಯುತ್ತಾರೆ.

ಹಾಗಾದರೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ, ಹೌದು. ದೇವರ ಮೇಲೆ ಪ್ರಮಾಣ ಮಾಡಿ, ಯಾವ ಕಾರಣಕ್ಕಾಗಿ ನಾನು ಸುಳ್ಳು ನುಡಿದಿರುತ್ತೇನೆ ಎಂದರೆ, ಅವರು ನಮ್ಮ ಮೇಲೆ ಹಲ್ಲೆ ಮಾಡಿದ್ದರಿಂದ, ದೂರು ನೀಡಿರುತ್ತೇವೆ ಎಂದು ನುಡಿಯುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಪ್ರ ದ ನ್ಯಾದಂ ಮುಂಡಗೋಡ.**